ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಸಿ.ಸಿ. ನಂ. 1536/2024

ಸಾಕ್ಷಿದಾರರ ಹೆಸರು : ಅಜಯ್

ತಂದೆಯ/ಗಂಡನ ಹೆಸರು : ಗೋಪಿನಾಥ್

ವಯಸ್ಸು : 40 ವರ್ಷ

ಉದ್ಯೋಗ : ಆಟೋ ಚಾಲಕ

ವಾಸಃ : ಅಣಲೇ ಕೊಪ್ಪ

ಸಿ ಡಬ್ಲ್ಯೂ-5 ಪಿ.ಡಬ್ಲ್ಯೂ-4

ದಿನಾಂಕ 04.06.2025. ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.

ಮುಖ್ಯ ವಿಚಾರಣೆ:- ಸ.ಸ. ಅ ರವರಿಂದಃ

ನಿಪಿ-4 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ನಿಪಿ-4 ಅನ್ನು ಪೊಲೀಸರು ನನಗೆ ದಿನಾಂಕ ನೆನಪಿಲ್ಲ. ಬೆಃ 10.00 ಗಂಟೆಯಿಂದ 11 ಗಂಟೆಯವರೆಗೆ ಸೊರಬ ರಸ್ತೆಯ ಸಿಗಂದೂರು ಬಾರ್ ಅಂಡ್ ರೆಸ್ಟೋರೆಂಟ್ ಬಳಿ 2 ಬೈಕ್ಗೆ ಅಪಘಾತ ವಾದ ಹಿನ್ನಲೆಯಲ್ಲಿ ಮಹಜರ್ ಅನ್ನು ಮಾಡಿರುತ್ತಾರೆ. ನನ್ನೊಂದಿಗೆ ಚಾಸಾ-4 ರವರು ಇದ್ದರು. ಮಹಜರ್ ಕಾಲದಲ್ಲಿ ತೆಗೆದಂತಹ 2 ಪೋಟೋಗಳ್ಳು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 6 ಮತ್ತು ನಿಪಿ-7 ಎಂದು, ಅದಕ್ಕೆ ಸಂಬಂದಪಟ್ಟ ಸಿಡಿಯನ್ನು ನಿಪಿ-8 ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ-5 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೆರೆಗೆ ಅದನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು. ನಿಪಿ-5 ಕ್ಕೆ ನನ್ನ ಜೊತೆ ಚಾಸಾ-4 ರವರು ಸಹಿ ಹಾಕಿರುತ್ತಾರೆ. ನಿಪಿ-5 ಅನ್ನು ಸಾಗರದ ಪೇಟೆ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತಾರೆ. ಪಂಚನಾಮೆಗೆ ನನ್ನ ಸಹಿಯನ್ನು ಪಡೆದಿರುತ್ತಾರೆ ಹಾಗೂ ಪೋಟೋಗಳನ್ನು ತೆಗೆದಿರುತ್ತಾರೆ. ಆ ಸಂದರ್ಬದಲ್ಲಿ ತೆಗೆದ ಪೋಟೋ ಎಂದು ಸಾಕ್ಷಿ ನುಡಿದ ಮೇರಗೆ ಅವುಗಳನ್ನು ಕ್ರಮವಾಗಿ ನಿಪಿ-9 ರಿಂದ 13 ಎಂದು

ಗುರುತಿಸಲಾಯಿತು. ನಿಪಿ-5 ರಡಿಯಲ್ಲಿ ಬೈಕುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ.

ಪಾಟೀ ಸವಾಲು ಆರೋಪಿ ಶ್ರೀ ಕೆ.ಎಲ್.ಬಿ ವಕೀಲರಿಂದಃ-

ನನಗೆ ಪ್ರಕರಣದ ಬಗ್ಗೆ ಎನ್ನೂ ಗೊತ್ತಿಲ್ಲ ಎಂದರೆಸರಿ. ನಿಪಿ-4 ಮತ್ತು 5 ಕ್ಕೆ ಪೊಲೀಸರ ಕೋರಿಕೆ ಮೇರಗೆ ಸಹಿ ಹಾಕಿರುತ್ತೇನೆ ಎಂದರೆ ಸರಿ. ಯಾರ ತಪ್ಪಿನಿಂದ ಹೇಗೆ ಅಪಘಾತ ಆಯಿತು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಪಂಚನಾಮೆಗೆ ಬರಲು ಪೋಲೀಸರು ನನಗೆ ನೋಗಟೀಸು ನೀಡಿರುವುದಿಲ್ಲ. 2 ಪಂಚನಾಮೆಯ ಚೆಕ್ಕುಬಂದಿ ಹೇಳಲು ಆಗುವುದಿಲ್ಲ. ನಿಪಿ-4 ಮತ್ತು 5 ಕ್ಕೆ ಪೋಲೀಸರ ಒತ್ತಾಯದ ಮೇಲೆ ಸಹಿ ಹಾಕಿರುತ್ತೇನೆ ಎಂದರೆ ಸರಿ. ನಿಪಿ-4 ಮತ್ತು 5 ಮಹಜರ್ ಅನ್ನು ಯಾರು ಬರೆದರು ಎಂದು ನನಗೆ ಹೆಸರು ನೆನಪಿಲ್ಲ. ನಿಪಿ-4 ಮತ್ತು 5 ಅನ್ನು ಯಾವ ದಿನಾಂಕದಂದು ಎಷ್ಟು ಗಂಟೆಯಿಂದ ಎಷ್ಟು ಗಂಟೆಯ ಒಳಗೆ ಮಾಡಿದರು ಎಂದು ನನಗೆ ಹೇಳಲು ಆಗುವುದಿಲ್ಲ ಎಂದರ ಸರಿ. ನಿಪಿ-4 ಮತ್ತು 5 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಇಂದು ಬೆಳಗ್ಗೆ ನೋಡಿದ ಬಳಿಕ ಗೊತ್ತಾಗಿರುತ್ತದೆ.

ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

ಆರೋಪಿ ಪರ ಪಾಟೀ ಸವಾಲು ಇಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.